(ಸಭೆಯ ಕಲಾಪವು 11.00 ಗಂಟೆ 11 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ.

1. <u>ಪ್ರಕಟಣೆ</u>

ವಿಷಯ : 14ನೇ ವಿಧಾನಸಭೆಯ ಸದಸ್ಯರುಗಳ ವ್ಯಕ್ತಿ ಪರಿಚಯ ಪುಸ್ತಕ ತಯಾರಿಸುವ ಬಗ್ಗೆ.

14ನೇ ವಿಧಾನಸಭೆಯ ಸದಸ್ಯರುಗಳ ವ್ಯಕ್ತಿ ಪರಿಚಯ 'Who is who' ಪುಸ್ತಕವನ್ನು ತಯಾರಿಸುವ ಸಲುವಾಗಿ ಎಲ್ಲಾ ಮಾನ್ಯ ಸದಸ್ಯರುಗಳಿಂದ ಮಾಹಿತಿ ಪಡೆಯುವುದಕ್ಕಾಗಿ ಮಾಹಿತಿಯ ನಮೂನೆಯ ಪ್ರತಿಗಳನ್ನು ಈಗಾಗಲೇ ತಮ್ಮೆಲ್ಲರಿಗೂ ಒದಗಿಸಲಾಗಿದೆ. ಆದರೆ ಹಲವಾರು ಸದಸ್ಯರು ಇದುವರೆವಿಗೂ ಸದರಿ ನಮೂನೆಯನ್ನು ಭರ್ತಿ ಮಾಡಿ ಒದಗಿಸದಿರುವುದು ತಿಳಿದು ಬಂದಿರುತ್ತದೆ. ಆದುದರಿಂದ ಸದರಿ ನಮೂನೆಯನ್ನು ಭರ್ತಿ ಮಾಡಿ ಅದರೊಂದಿಗೆ ತಮ್ಮ ಮೂರು ಭಾವಚಿತ್ರಗಳನ್ನು ಲಗತ್ತಿಸಿ ನೀಡಬೇಕೆಂದು ಕೋರಲಾಗಿದೆ. ವಿಧಾನಸಭೆಯ ಪೂರ್ವ ಮೊಗಸಾಲೆಯಲ್ಲಿ ಸದಸ್ಯರ ಭಾವಚಿತ್ರವನ್ನು ತೆಗೆಯಲಾಗುತ್ತಿದೆ. ಇದುವರೆಗೆ ಭಾವಚಿತ್ರವನ್ನು ತೆಗೆಸಿಕೊಳ್ಳದಿರುವ ಮಾನ್ಯ ಸದಸ್ಯರುಗಳು ಆದ್ಯತೆ ಮೇರೆಗೆ ಭಾವಚಿತ್ರವನ್ನು ತೆಗೆಸಿಕೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

2. <u>ಕಾರ್ಯದರ್ಶಿಯವರ ವರದಿ</u>

ವಿಷಯ : 13ನೇ ವಿಧಾನ ಸಭೆಯ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಎರಡನೇ ವರದಿಯ ಮಂಡನೆ.

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರೆ, ಅ) 13ನೇ ವಿಧಾನಸಭೆಯ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಎರಡನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾಗುವ 3 ಮತ್ತು 4ನೇ ಪಟ್ಟಿ